ತಮ್ಮನ್ನು ಶಿಷ್ಯರನ್ನಾಗಿ ಸ್ವೀಕರಿಸಬೇಕೆಂದು ಬೇಡಿದರು. ಮಹಾಪೂರ್ಣರು ಕೂಡಲೇ ಒಪ್ಪಿದರು. ಅಲ್ಲಿಯೇ ಒಂದು ಬಕುಳ ಮರದ ಕೆಳಗೆ, ಅಗತ್ಯವಾದ ವಿಧಿಗಳನ್ನು ರಾಮಾನುಜರಿಂದ ಮಾಡಿಸಿ, ತತ್ತ್ವರಹಸ್ಯವನ್ನು ಉಪದೇಶಿಸಿದರು. ಅನಂತರ ರಾಮಾನುಜರು ಮಹಾಪೂರ್ಣರನ್ನು ಕಾಂಚೀಪುರಕ್ಕೆ ಕರೆದುಕೊಂಡು ಹೋಗಿ ತಮ್ಮಲ್ಲೇ ಇರಿಸಿಕೊಂಡರು.

ಆರು ತಿಂಗಳುಗಳ ಕಾಲ ರಾಮಾನುಜರು ಮಹಾಪೂರ್ಣರ ಸೇವೆಯನ್ನು ಮಾಡಿದರು. ಆಳ್ವಾರರು ರಚಿಸಿದ್ದ ನಾಲಾಯಿರ (ನಾಲ್ಕು ಸಾವಿರ) ಪ್ರಬಂಧಗಳ ಅಂತರಾರ್ಥವನ್ನು ಕಲಿತರು. ಈ ಪ್ರಬಂಧಗಳಲ್ಲಿ ಅಡಕವಾಗಿರುವ ಶ್ರೀವೈಷ್ಣವ ಸಿದ್ಧಾಂತವನ್ನೂ, ರಹಸ್ಯಗಳನ್ನೂ ಅರಿತುಕೊಂಡರು.

ಮಹಾಪೂರ್ಣರು ಕೂಡ ಬ್ರಾಹ್ಮಣರೇನಲ್ಲ. ಮಹಾಪೂರ್ಣರ ಹೆಂಡತಿ ಒಂದು ದಿನ ಬಾವಿಯಿಂದ ನೀರು ಸೇದುತ್ತಿದ್ದರು. ಆಗ ರಾಮಾನುಜರ ಹೆಂಡತಿ ನೀರು ಸೇದಿ ಇಟ್ಟಿದ್ದ ಕೊಡದ ಮೇಲೆ ಕೆಲವು ಹನಿಗಳು ಬಿದ್ದವು. ಇದರಿಂದ ತಮ್ಮ ಮಡಿ ಹಾಳಾಯಿತೆಂದು ರಾಮಾನುಜರ ಹೆಂಡತಿಯಾದ ರಕ್ಷಾಂಬಾಳ್ ಕೂಗಾಡಿದರು. ಮಹಾಪೂರ್ಣರು ಇದರಿಂದ ತುಂಬ ನೊಂದುಕೊಂಡರು. ತಾವು ಇನ್ನು ಇಲ್ಲಿ ಇದ್ದರೆ, ಅದೇ ಗಂಡ–ಹೆಂಡಿರ ನಡುವೆ ವೈಮನಸ್ಯಕ್ಕೆ ಕಾರಣವಾಗುತ್ತದೆಂದು ಬಗೆದು, ಶ್ರೀರಂಗಕ್ಕೆ ವಾಪಸ್ಸು ಹೊರಟುಹೋದರು.

ಈ ಮಧ್ಯೆ ಬೇರೆಲ್ಲಿಯೋ ಹೋಗಿದ್ದ ರಾಮಾನುಜರು ಮನೆಗೆ ಮರಳಿ ಬಂದರು. ತಮ್ಮ ಪತ್ನಿಯ ವಿಷಯದಲ್ಲಿ ಅವರಿಗೆ ಬಹಳ ಕೋಪ ಬಂದಿತು. ಇಂಥ ಪತ್ನಿಯೊಡನೆ ಬಾಳುವೆ ಅಸಾಧ್ಯ ಎಂದು ನಿಶ್ಚಯಿಸಿದರು. ಉಪಾಯದಿಂದ ಆಕೆಯನ್ನು ತವರುಮನೆಗೆ ಕಳಿಸಿದರು. ಅನಂತರ ವರದರಾಜಸ್ವಾಮಿಯ ಎದುರಿಗೆ ಸಂನ್ಯಾಸವನ್ನು ಸ್ವೀಕರಿಸಿದರು. ಕಾಷಾಯವಸ್ತ್ರ, ತ್ರಿದಂಡಗಳನ್ನು ಧರಿಸಿ ರಾಮಾನುಜರು 'ಯತಿರಾಜ'ರಾದರು. ಅಲ್ಲಿಗೆ ಅವರ ಸಂಸಾರಬಂಧನ ಕಳೆಯಿತು.

## ಶ್ರೀರಂಗದಲ್ಲಿ

ರಾಮಾನುಜರು ಸಂನ್ಯಾಸಿಯಾದ ಸುದ್ದಿ ಎಲ್ಲೆಡೆ ಹರಡಿತು. ಅನೇಕರು ಅವರನ್ನು ನೋಡಲು ಬಂದರು; ಹಾಗೆಯೇ ಅವರ ವರ್ಚಸ್ಸಿಗೆ ಆಕರ್ಷಿತರಾಗಿ ಶಿಷ್ಯರಾದರು. ಇವರಲ್ಲಿ ರಾಮಾನುಜರ ತಂಗಿಯ ಮಕ್ಕಳಾದ ದಾಶರಥಿ ಮತ್ತು ಕೂರೇಶ ಮುಖ್ಯರಾದವರು.

ಅಷ್ಟುಹೊತ್ತಿಗೆ ಯಾದವಪ್ರಕಾಶರಿಗೆ ತಮ್ಮ ಹಿಂದಿನ ತಪ್ಪುಗಳ ಅರಿವಾಗಿತ್ತು. ಅವರು ರಾಮಾನುಜರನ್ನು ಕಾಣಲು ಬಂದರು. ರಾಮಾನುಜರಿಗೂ ಅವರನ್ನು ಕಂಡು ಸಂತೋಷವಾಯಿತು. ಯಾದವಪ್ರಕಾಶರ ಅನೇಕ ಸಂಶಯಗಳನ್ನು ಕೂರೇಶನು ಪರಿಹರಿಸಿದನು. ಇದರಿಂದ ಅವರ ಮನಸ್ಸು ಪೂರ್ತಿ ಪರಿವರ್ತನೆ ಹೊಂದಿತು. ಅವರು ಶ್ರೀವೈಷ್ಣವದೀಕ್ಷೆಯನ್ನು ಸ್ವೀಕರಿಸಿದರು. ಅಂದಿನಿಂದ ಅವರ ಹೆಸರು 'ಗೋವಿಂದ ಜೀಯರ್' ಎಂದಾಯಿತು.

ರಾಮಾನುಜರಿಗೆ ತಮ್ಮ ಬಂಧುವಾದ ಗೋವಿಂದನ ಆವಶ್ಯಕತೆ ತುಂಬ ಇತ್ತು. ಅದಕ್ಕಾಗಿಯೇ ಆವರು ಅವನನ್ನು ಕಾಳಹಸ್ತಿಯಿಂದ ಕರೆಸಿಕೊಂಡರು.

ಶ್ರೀರಂಗದಲ್ಲಿದ್ದ ಯಾಮುನಾಚಾರ್ಯರ ಶಿಷ್ಯರಿಗೆ ರಾಮಾನುಜರದ್ದೇ ಧ್ಯಾನ. ಅವರನ್ನು ಶ್ರೀರಂಗಕ್ಕೆ ಕರೆತರಲು ಯಾಮುನರ ಶಿಷ್ಯರಾದ ವರರಂಗನನ್ನು ಆ ಶಿಷ್ಯರು ಕಳುಹಿಸಿದರು. ವರರಂಗರು ಕಾಂಚೀಪುರದ ಅಧಿದೇವತೆಯಾದ ವರದರಾಜಸ್ವಾಮಿಯನ್ನು ಒಲಿಸಿಕೊಂಡು, ರಾಮಾನುಜರನ್ನು ಶ್ರೀರಂಗಕ್ಕೆ ಕರೆದುತಂದರು.

ಶ್ರೀರಂಗದಲ್ಲಿ ರಾಮಾನುಜರು ತಮ್ಮ ಶಿಷ್ಯರಿಗೆ ಪ್ರತಿದಿನವೂ ಬೋಧಿಸುತ್ತಿದ್ದರು. ಆಗ ತಾವು ಕಲಿತುಕೊಳ್ಳಬೇಕಾದ್ದು ಇನ್ನೂ ಬಹಳಷ್ಟಿದೆ ಎಂದು ಅವರಿಗೆ ಅನ್ನಿಸಿತು. ಹೀಗಾಗಿ ಮಹಾಪೂರ್ಣರ ಬಳಿ ಮತ್ತೊಮ್ಮೆ ಶಿಷ್ಯತ್ವವನ್ನು ಕೈಗೊಂಡರು. ಅವರಿಂದ ಕಲಿಯಬೇಕಾದ್ದನ್ನೆಲ್ಲ ಕಲಿತುಕೊಂಡರು. ಅನಂತರ ಮಹಾಪೂರ್ಣರು ರಾಮಾನುಜರಿಗೆ ಹೀಗೆ ಹೇಳಿದರು: "ಗೋಷ್ಠೀಪೂರ್ಣ ಎಂಬ ಬಹುದೊಡ್ಡ ವಿದ್ವಾಂಸರು ಗೋಷ್ಠೀಪುರದಲ್ಲಿ ಇದ್ದಾರೆ. ಶ್ರೀವೈಷ್ಣವ ಮತದ ಅರ್ಥವನ್ನು ಪೂರ್ಣವಾಗಿ ನಿಮಗೆ ಹೇಳಿಕೊಡುವುದಕ್ಕೆ ಅವರು ಮಾತ್ರವೇ ಸಮರ್ಥರು. ನೀವು ಅವರಲ್ಲಿಗೆ ಹೋಗಿ ಅನುಗ್ರಹವನ್ನು ಪಡೆಯಿರಿ." ಅಂತೆಯೇ ರಾಮಾನುಜರು ಗೋಷ್ಠೀಪೂರ್ಣರ ಹತ್ತಿರ ಹೋಗಿ, ತಮ್ಮನ್ನು ಅನುಗ್ರಹಿಸಬೇಕೆಂದು ಕೇಳಿಕೊಂಡರು. ಆದರೆ ಗೋಷ್ಠೀಪೂರ್ಣರು ಅವರ ಬೇಡಿಕೆಯನ್ನು ತಿರಸ್ಕರಿಸಿದರು. ಆದರೆ ರಾಮಾನುಜರು ಬಿಡಲಿಲ್ಲ. ಮತ್ತೆ ಮತ್ತೆ ಹದಿನೆಂಟು ಬಾರಿ ಅವರಲ್ಲಿಗೆ ಹೋಗುತ್ತಲೇ ಇದ್ದರು, ಮತ್ತೆ ಮತ್ತೆ ಬೇಡಿಕೊಳ್ಳುತ್ತಲೇ ಇದ್ದರು. ತದನಂತರವಷ್ಟೇ ಗೋಷ್ಠೀಪೂರ್ಣರಿಗೆ ರಾಮಾನುಜರ ಶ್ರದ್ಧೆ ಮತ್ತು ಯೋಗ್ಯತೆಗಳ ಬಗ್ಗೆ ವಿಶ್ವಾಸ ಮೂಡಿತು. ಅವರನ್ನು ಪರೀಕ್ಷಿಸಲೆಂದೇ ಗೋಷ್ಠೀಪೂರ್ಣರು ಹೀಗೆ ಮಾಡಿದ್ದರು. ಅನಂತರ ದಂಡಕಮಂಡಲುಗಳೊಡನೆ ತಮ್ಮ ಬಳಿ ಬರುವಂತೆ ರಾಮಾನುಜರಿಗೆ ತಿಳಿಸಿದರು. ಆದರೆ, ರಾಮಾನುಜರು ತಮ್ಮ ಇಬ್ಬರು ಶಿಷ್ಯರಾದ ದಾಶರಥಿ ಮತ್ತು ಕೂರೇಶ – ಇವರೊಡನೆ ಅಲ್ಲಿಗೆ ಬಂದರು. ಆಗ ಗೋಷ್ಠೀಪೂರ್ಣರು, "ಒಬ್ಬನನ್ನೇ ಬರಹೇಳಿದರೆ, ಇವರೊಡನೇಕೆ ಬಂದೆ?" ಎಂದು ಆಕ್ಷೇಪಿಸಿದರು. ಅದಕ್ಕೆ ರಾಮಾನುಜರು, "ನನ್ನ ಜೀವನದಲ್ಲಿ ದಾಶರಥಿಯೇ ದಂಡ, ಕೂರೇಶನೇ ಕಮಂಡಲು. ಅವರಿಲ್ಲದೆ ನಾನಿಲ್ಲ, ನಾನಿಲ್ಲದೆ ಅವರಿಲ್ಲ" ಎಂದರು. ರಾಮಾನುಜರಿಗೆ ತಮ್ಮ ಶಿಷ್ಯರ ಮೇಲೆ ಇರುವ ಪ್ರೀತಿಯನ್ನು ಕಂಡು ಗೋಷ್ಠೀಪೂರ್ಣರು ಬಹಳ ಸಂತೋಷಪಟ್ಟರು. ಅವರು ರಾಮಾನುಜರಿಗೆ 'ಅಷ್ಟಾಕ್ಷರೀ ಪವಿತ್ರಮಂತ್ರ'ವನ್ನೂ, ಅದರ ಅಂತರಾರ್ಥವನ್ನೂ ಉಪದೇಶಿಸಿದರು. ಈ ಮಂತ್ರವನ್ನು ಜಪಿಸುವವರಿಗೆ ಪರಮಪದವೇ ಲಭಿಸುವುದೆಂದೂ, ಆದರೆ ಇದನ್ನು ಯಾರಿಗೂ ಹೇಳಬಾರದೆಂದೂ ಎಚ್ಚರಿಕೆ ಕೊಟ್ಟರು. ಹಾಗೆ ಹೇಳಿದರೆ ನರಕಕ್ಕೆ ಹೋಗುತ್ತೀಯೆಂದು ಹೆದರಿಸಿದರು.

(ಮುಂದುವರಿಯುವುದು)